Supply of Electricity to Solur, Kudur and Thippasandra.

Q.—590. Sri S. SIDDAPPA (Magadi).—

Will the Government be pleased to state :—

whether they propose to supply electric lights to the hoblis of Solur, Kudur and Thippasandra of Magadi Taluk which have been praying for the same from a long time ; if so, when ?

A.—Dr. R. NAGAN GOWDA (Minister for Agriculture).—

The matter was investigated in 1950, but the estimates could not be sanctioned owing to inadequate revenue return. It is again being examined.

ಶ್ರೀ ಎಸ್. ಸಿದ್ದಪ್ಪ.—ಮಾಗಡಿ ತಾಲ್ಲೂಕು ಸೋಲೂರು, ಕುಂದೂರು ಮತ್ತು ತಿಪ್ಪಸಂದ್ರ ಹೋಬಳಿಗಳಿಗೆ ದೀಪದ ವ್ಯವಸ್ಥೆ ಮಾಡಬೇಕೆಂದು ಕೇಳಿರುವುದು ಯಾವಾಗ ? ಅದನ್ನು ಪರಿಶೀಲಿಸುವುದು ಯಾವಾಗ ?

ಡಾ॥ ಆರ್. ನಾಗನಗೌಡ.—ತಮಗೆ ತಿಳಿದ ಹಾಗೆ ವಿದ್ಯುಚ್ಛಕ್ತಿಯನ್ನು ಒಂದು ಗ್ರಾಮಕ್ಕೆ ಕೊಡಬೇಕಾದರೆ ಆ ಪ್ರದೇಶದಿಂದ ಶೇಕಡ 7½ ಯಷ್ಟು ರಿಟರ್ನ್ ಬರಬೇಕು. ಈಗ ತಮ್ಮ ಹೋಬಳಿಯಲ್ಲಿ ಗೂಡೂರು, ಹುಲಿಕಲ್ ಮತ್ತು ಕಣ್ಣೂರುಗಳಿಂದ ಶೇಕಡ 3, 2 ಹುಟ್ಟುವಳಿಯಿದೆ ; ಮನಗಲಹಳ್ಳಿ, ನಾರಸಂದ್ರ ಮತ್ತು ನೇರಳೇ ಕೆರೆಯಿಂದ ಶೇಕಡ 3.2 ಹುಟ್ಟುವಳಿಯಿದೆ ; ಸೋಲೂರಿನಿಂದ ಶೇಕಡ 2.7 ಹುಟ್ಟುವಳಿಯಿದೆ. ಇಷ್ಟು ಕಡಮೆ ಹುಟ್ಟುವಳಿಯಿರುವಾಗ ನಾವಾದರೂ ಹೇಗೆ ಒದಗಿಸುವುದು ?

ಶ್ರೀ ಎಸ್. ಸಿದ್ದಪ್ಪ.—ಮಾಗಡಿ ತಾಲ್ಲೂಕಿನ ಈ ಹೋಬಳಿಗಳಿಗೆ ವಿದ್ಯುಚ್ಛಕ್ತಿಯ ದೀಪಗಳು ಈಗ ಅತ್ಯಗತ್ಯವಾಗಿ ಮತ್ತು ಅತಿಜರೂರಾಗಿ ಬೇಕಾಗಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಅಧ್ಯಕ್ಷರು.—ಅದನ್ನು ಯೋಚಿಸುತ್ತಿದೆಯೆಂಬು ದಾಗಿ ಉತ್ತರ ಕೊಟ್ಟಿದ್ದಾರಲ್ಲ.

Electrification of Major Villages in Arsikere Taluk.

Q.—628. Sri K. PANCHAKSHARIAH (Arsikere).—

Will the Government be pleased to state :—

whether they propose to provide electricity to major villages such as Harnahalli and Dodda Metikurke in Arsikere Taluk ?

A.—Dr. R. NAGAN GOWDA (Minister for Agriculture).—

The matter is under consideration.

ಶ್ರೀ ಕೆ. ಪಂಚಾಕ್ಷರಯ್ಯ.—ಇದರ ಬಗ್ಗೆ ಎಸ್ಟಿಮೇಟ್ ಸರ್ವೇ ಆಗಿದೆಯೇ ?

ಡಾ॥ ಆರ್ ನಾಗನಗೌಡ.—ಆಗಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಎಷ್ಟಾಗಿದೆ ?

ಡಾ॥ ಆರ್. ನಾಗನಗೌಡ.—ಕಾಮಸಂದ್ರ, ಜಯಚಾಮರಾಜಪುರ ಇದಕ್ಕೆ 5 ಲಕ್ಷ 16 ಸಾವಿರಕ್ಕೆ ಎಸ್ಟಿಮೇಟ್ ತಯಾರಾಗಿದೆ.

ಶ್ರೀ ಕೆ. ಪಂಚಾಕ್ಷರಯ್ಯ.—ಹಾಗಿದ್ದರೆ ಏಕೆ ಮುಂದಿನ ಕಾರ್ಯಕ್ರಮವನ್ನು ಕೈಗೊಂಡಿಲ್ಲ ?

ಡಾ॥ ಆರ್. ನಾಗನಗೌಡ.—ನಾವು ಮಾಡುವ ಕೆಲಸವನ್ನು ಮಾಡಿದ್ದೇವೆ. ಆದರೆ ಪಾರ್ಟಿ ಡಿಪಾಜಿಟ್‌ಮಾಡಿಲ್ಲ.

ಶ್ರೀ ಮೈ. ಎಂ. ಚಂದ್ರಶೇಖರಯ್ಯ.—ತಾವು ಈಗ ತಾನೇ ತಿಳಿಸಿದ 5 ಲಕ್ಷ ಚಿಲ್ಲರೆ ರೂಪಾಯಿನ ಎಸ್ಟಿಮೇಟ್‌ನಲ್ಲಿ ಇರಿಗೇಷನ್ ಪ್ರಾಜೆಕ್ಟ್ ಮಾತ್ರವಲ್ಲದೆ ಈ ಪ್ರಶ್ನೆಯಲ್ಲಿ ನಮೂದಿಸಿರುವ ಹಳ್ಳಿಗಳ ವಿಷಯವೂ ಸೇರಿದೆಯೇ ?

ಡಾ॥ ಆರ್. ನಾಗನಗೌಡ.—ಅದರಲ್ಲಿ ಇರಿಗೇಷನ್ ಪ್ರಾಜೆಕ್ಟ್‌ಗಳಿಗೆಂದು 196 ಪಂಪಿಂಗ್ ಸೆಟ್ಸ್ ಸೇರಿವೆ, ಹಾರನಹಳ್ಳಿಗಾಗಿ 20 ಪಂಪಿಂಗ್ ಸೆಟ್ಸ್ ಸಹ ಸೇರಿವೆ.

Road works in Scarcity Areas.

Q.—13. Sri H. C. LINGA REDDY (Malur).—

Will the Government be pleased to state.—

(*a*) the number of road works taken up in the scarcity areas of the State ;

(*b*) the amount spent for these works ;

(*c*) the condition of these distress relief road works now ;

(*d*) whether they have entrusted these road works to the District Boards or P.W.D. for their maintenance ;

(*e*) if not, why ?

A.—Sri KADIDAL MANJAPPA (Minister for Revenue and Public Works).—

(*a*) and (*b*) The number of road works taken up in each District and the amounts spent on them are given below :—